ಗದ್ದಿಗೌಡರು ಹಾಗೂ ಹುಂಡೇಕಾರರ ತಾಲ್ಲೂಕು ಪುನರ್ವಿಂಗಡಣಾ ಸಮಿತಿಗಳು.

149(195) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದ್ದಿಗೌಡ್ರ ಹಾಗೂ ಹುಂಡೇಕಾರರ ತಾಲ್ಲೂಕು ಪುನರ್ವಿಂಗಡನಾ ಸಮಿತಿಗಳ ಶಿಫಾರಸ್ಸಿನಂತೆ ಗುಳೇದಕುಡ್ಡವನ್ನು ತಾಲ್ಲೂಕು ಕೇಂದ್ರವಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಜಿಲ್ಲಾ ಪುನರ್ವಿಂಗಡನೆ ಮಾಡಿದಾಗ ನಂತರದಲ್ಲಿ ತಾಲ್ಲೂಕು ಪುನರ್ವಿಂಗಡನೆ ಮಾಡಲಾಗುವುದೆಂಬ ಹೇಳಿಕೆಯಂತೆ ಸರ್ಕಾರವು ಪ್ರಕ್ರಿಯೆ ಏನಾದರೂ ಪ್ರಾರಂಭ ಮಾಡಿದೆಯೇ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ರಾಜ್ಯದಲ್ಲಿ ಸಧ್ಯಕ್ಕೆ ಯಾವುದೇ ತಾಲ್ಲೂಕುಗಳನ್ನು ರಚಿಸುವ ವಿಚಾರ ಸರ್ಕಾರದಲ್ಲಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಗುಳೇದಗುಡ್ಡ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳು.

150(357) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದ್‌ಗುಡ್ಡ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ಮಾಣಗೊಂಡ ಅಂಗನವಾಡಿ ಕಟ್ಟಡಗಳ ಸಂಖ್ಯೆ ಎಷ್ಟು ;

ಆ) ಅವುಗಳಿಗೆ ಒದಗಿಸಲಾದ ಅನುದಾನ ಎಷ್ಟು ;

ಇ) ಅಂಗನವಾಡಿ ಕಟ್ಟಡಗಳಲ್ಲಿ ಪೂರ್ಣಗೊಂಡ ಪ್ರಗತಿಯಲ್ಲಿರುವ ಕೆಲಸ ಪ್ರಾರಂಭವಾಗದೇ ಇರುವ ಕಟ್ಟಡಗಳ ಸಂಖ್ಯೆ ಎಷ್ಟು?

ಶ್ರೀಮತಿ ವಿಮಲಾಬಾಯಿ ಜಗದೇವ್ ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :—

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳಡಿಯಲ್ಲಿ 21 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

ಆ) ಒಟ್ಟು ರೂ. 23.10 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ.

ಇ) ನಿರ್ಮಾಣ ಮಾಡಲು ತೆಗೆದುಕೊಂಡ 21 ಅಂಗನವಾಡಿ ಕಟ್ಟಡಗಳಲ್ಲಿ 15 ಪೂರ್ಣಗೊಂಡಿದ್ದು, 6 ಕಟ್ಟಡಗಳು ಪ್ರಗತಿ ಹಂತದಲ್ಲಿದೆ. ಕೆಲಸ ಪ್ರಾರಂಭವಾಗದೇ ಇರುವ ಕಟ್ಟಡಗಳು ಯಾವುದು ಇರುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಭೂ ಸುಧಾರಣಾ ಪ್ರಕರಣಗಳು.

153(573) ಶ್ರೀ ಎಸ್ ಶಿವಣ್ಣ (ತುಮಕೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಚ್ಚನ್ಯಾಯಾಲಯದಿಂದ ತುಮಕೂರು ಜಿಲ್ಲೆಯಲ್ಲಿ ಎಷ್ಟು ಭೂ ಸುಧಾರಣಾ ಪ್ರಕರಣಗಳು ಮರು ಪರಿಶೀಲನೆಗಾಗಿ ಭೂ ಸುಧಾರಣಾ ಮಂಡಳಿಗೆ ಬಂದಿವೆ ಹಾಗೂ ಮುಕ್ತಾಯವಾದ ಪ್ರಕರಣಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ತುಮಕೂರು ತಾಲ್ಲೂಕಿನ ಭೂ ಸುಧಾರಣಾ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 658

(ತಾಲ್ಲೂಕುವಾರು ಮಾಹಿತಿ ಲಗತ್ತಿಸಿದೆ)

514

(ತಾಲ್ಲೂಕುವಾರು ಮಾಹಿತಿ ಲಗತ್ತಿಸಿದೆ)

ಆ) 54